ನಾನಾ ರೀತಿಯಲ್ಲಿ ಹೇಳಿಕೊಂಡರೂ ನೀವು ನಿಮ್ಮ ಪಾಲಿಸಿಯನ್ನೇ ಹೇಳುತ್ತಾ ಇದ್ದೀರೇ ಹೊರತು..It is All right. Power is not going to be with you or with anybody. We must be considerate to certain situations. Don't go by technicalities. ಎಲ್ಲೋ ಒಂದು ಕಡೆ ಕಂಪ್ಯಾಷನ್ ಇರಬೇಕಾಗುತ್ತದೆ After all, he is a Member belonging to Backward classes and he is asking for it.

ಡಾ. ಎಂ.ಶಂಕರ್ ನಾಯಕ್: ಹುಬ್ಬಳ್ಳಿ, ಧಾರವಾಡ, ಬೆಳಗಾಂ ದಲ್ಲಿ ಮಾತ್ರ ಬೇಡಿಕೆ ಇತ್ತು, ಗ್ರಾಮಾಂತರ ಪ್ರದೇಶಗಳಲ್ಲೂ ಬೇಡಿಕೆ ಇತ್ತು, ನಮ್ಮ ಡೈರೆಕ್ಟರ್ ಹೋಗಿ ಅಲ್ಲಿ ನೋಡಿದ ಮೇಲೆ, ರೆಕಮೆಂಡೇಷನ್ ಮಾಡಿದ ಮೇಲೆ ಅದು ನಡೆಯುತ್ತಿದೆ. ಅವರಿಗೆ ಇರುವ ಫೈನಾನ್ಷಿಯಲ್ ಅಲ್ಲಿ ಇರುವಂತಹ ಜಾಗ, ಲೈಬ್ರರಿ, ಗಾರ್ಡನ್‌ಗೆ ಬೇಕಾದಂತಹ ಜಾಗ ಆ ರೆಕಮೆಂಡೇಷನ್ ಬಂದಿರುವುದನ್ನು ನೋಡಿ ನಾವು ಕೊಡಬೇಕಾಗುತ್ತದೆ. ಕ್ರೈಟೀರಿಯಾ ಇದೆ; ಸುಮ್ಮನೆ ಅಪ್ಲಿಕೇಷನ್ ಹಾಕಿದ ತಕ್ಷಣ ಯಾರಿಗೂ ಕೊಡುವುದಿಲ್ಲ.

ಶ್ರೀ ಡಿ.ಆರ್.ಪಾಟೀಲ್: ಅಧ್ಯಕ್ಷರೆ, ಇವತ್ತು ಆಗಸ್ಟ್ 20 ದೇವರಾಜ್ ಅರಸ 'ಅವರ ಹುಟ್ಟಿದ ಹಬ್ಬ, ಡಾ: ಶಂಕರ್ ನಾಯಕ್ ಅವರು ಮಂತ್ರಿಯಾದಂತಹ ಇಲಾಖೆಯಿಂದ ಕಾಳಿದಾಸ ಸಂಸ್ಥೆಗೆ ತೊಂದರೆ ಆಗುತ್ತಿದೆ. ಈ ತೊಂದರೆ ನಿಮ್ಮ ದೃಷ್ಟಿಯಲ್ಲಿ ಯೋಗ್ಯ ಎಂದು ಕಾಣಿಸಿದರೆ ಸುಮ್ಮನೆ ಕೂರುತ್ತೇನೆ.

ವಿಷಯ: ಮುಧೋಳದಲ್ಲಿ ರನ್ನ ಸ್ಮಾರಕ ಸರ್ಕಾರಿ ವಸತಿ ಶಾಲೆಗೆ ಕಟ್ಟಡ.

471 (3739)

ಶ್ರೀ ಗೋವಿಂದ ಎಂ.ಕಾರಜೋಳ (ಮುಧೋಳ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಧೋಳ ಪಟ್ಟಣದಲ್ಲಿರುವ ರನ್ನ ಸ್ಮಾರಕ ಸರ್ಕಾರಿ ವಸತಿ ಶಾಲೆಗೆ ಕಟ್ಟಡ ವಿಲ್ಲದೆ ವಿದ್ಯಾರ್ಥಿ: ವಿದ್ಯಾರ್ಥಿನಿಯರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಬಂದಿದ್ದರೆ ಕಟ್ಟಡ ನಿರ್ಮಾಣಕ್ಕೆ ಸರ್ಕಾರವು ಕೈಗೊಂಡ ಕ್ರಮವೇನು?

ಇ) 1997-98ನೇ ಸಾಲಿನಲ್ಲಿ ಕಟ್ಟಡಕ್ಕಾಗಿ ಎಷ್ಟು ಹಣ ಒದಗಿಸಲಾಗಿದೆ?

ಈ) ಎಷ್ಟು ದಿನಗಳಲ್ಲಿ ಕಟ್ಟಡ ನಿರ್ಮಾಣ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್. ಜಿ. ಗೋವಿಂದೆಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ಹೌದು.

ಆ) ಮುಧೋಳದಲ್ಲಿ ಶ್ರೀ ರನ್ನ ಸ್ಮಾರಕ ಕನ್ನಡ ವಸತಿ ಶಾಲೆಯನ್ನು 1996-97ನೇ ಸಾಲಿನಿಂದ ಪ್ರಾರಂಭಿಸಲಾಗಿದೆ. ಪ್ರಸ್ತುತ ಶಾಲೆಯು ಮುಧೋಳದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ನಡೆಯುತ್ತಿದೆ. ಈ ಶಾಲೆಯ 8 ಕೊಠಡಿಗಳನ್ನು ರನ್ನ ಸ್ಮಾರಕ ವಸತಿ ಶಾಲೆಗೆ ತೆಗೆದುಕೊಡಿದ್ದು, ಇದರಲ್ಲಿ 3 ಕೊಠಡಿಗಳಲ್ಲಿ ತರಗತಿಗಳನ್ನು, 5 ಕೊಠಡಿಗಳಲ್ಲಿ ವಸತಿ ಶಾಲೆಯನ್ನು ನಡೆಸಲಾಗುತ್ತಿದೆ. ಈ ಶಾಲೆಯ ಸಿಬ್ಬಂದಿ ವೇತನ ಮತ್ತು ವಸತಿ ನಿಲಯದ ನಿರ್ವಹಣೆಗಾಗಿ 1996-97ನೇ ಸಾಲಿನಲ್ಲಿ ರೂ. 10.00 ಲಕ್ಷ ಹಾಗೂ 1997-98ನೇ ಸಾಲಿನಲ್ಲಿ 20.00 ಲಕ್ಷಗಳನ್ನು ಬಿಜಾಪುರ ಜಿಲ್ಲಾ ಪಂಚಾಯತ್‌ಗೆ ಬಿಡುಗಡೆ ಮಾಡಲಾಗಿದೆ. ಈ ಹಣದಲ್ಲಿ ಉಳಿಕೆಯಾದ ಹಣವನ್ನು ಕಟ್ಟಡ ನಿರ್ಮಾಣಕ್ಕೆ ಬಳಸಿಕೊಳ್ಳಲು ಅನುಮತಿ ನೀಡಿದೆ.

ಇ) ಶ್ರೀ ರನ್ನಸ್ಮಾರಕ ಶಾಲೆಯು ವಸತಿ ಶಾಲೆಯಾಗಿದ್ದು ಶಾಲೆ-ವಸತಿ ನಿಲಯ-ಮತ್ತು ಇತರೆ ಸೌಲಭ್ಯಕ್ಕಾಗಿ ಪೂರ್ಣ ಕಟ್ಟಡ ನಿರ್ಮಾಣ ಕೈಗೊಳ್ಳಬೇಕಾಗಿದ್ದು ಇವನ್ನು ಮುಂದಿನ ವರ್ಷದಲ್ಲಿ ಕೈಗೊಳ್ಳಲಾಗುವುದು.

ಈ) ಕಟ್ಟಡ ನಿರ್ಮಾಣವನ್ನು ಮುಂದಿನ 1998-99ರಲ್ಲಿ ಪ್ರಾರಂಭಿಸಿ ಹಂತ ಹಂತವಾಗಿ ಕೈಗೊಂಡು ಪೂರ್ಣಗೊಳಿಸಲಾಗುವುದು.

ಶ್ರೀ ಗೋವಿಂದ ಎಂ. ಕಾರಜೋಳ: ಸನ್ಮಾನ್ಯ ಅಧ್ಯಕ್ಷರೆ, ಉತ್ತರ ಸಮಂಜಸವಾಗಿಲ್ಲ, ನಾನು ಕೇಳಿದ್ದು ಸರ್ಕಾರಿ ವಸತಿ ಶಾಲೆ ಕಟ್ಟಡಕ್ಕೆ ಏನು ಕ್ರಮ ಕೈಗೊಂಡಿದ್ದೀರಿ ಎಂದು. ಆದರೆ ಉತ್ತರದಲ್ಲಿ ಹೇಳಿದ್ದಾರೆ, ಪ್ರಾಥಮಿಕ ಶಾಲ ಕಟ್ಟಡ ಏನು ಇತ್ತು, ಅದರಲ್ಲೇ ನಾವು ಕೋಣೆಗಳನ್ನು ತೆಗೆದುಕೊಂಡು ನಡೆಸಿದ್ದೇವೆ ಎಂದು. ನಾನು ಕೇಳಿದ್ದು ಕಟ್ಟಡ ಕಟ್ಟುವ ಸಲುವಾಗಿ ಮತ್ತು ಇನ್ನೊಂದು ಉತ್ತರದಲ್ಲಿ ಹೇಳಿದ್ದಾರೆ ಇಪ್ಪತ್ತು ಲಕ್ಷ ರೂಪಾಯಿಗಳನ್ನು ನಾವು ನಿರ್ವಹಣೆ ಮತ್ತು ಸಿಬ್ಬಂದಿ ವೆಚ್ಚಕ್ಕಾಗಿ ವಸತಿ ಶಾಲೆಗೆ ಹಣ ಕೊಟ್ಟಿದ್ದೇವೆ ಆ ಉಳಿದ ಹಣದಲ್ಲಿ ಕಟ್ಟಬೇಕು ಎಂದು ಹೇಳಿದ್ದಾರೆ. ಆ ಉಳಿತಾಯದ ಹಣದಲ್ಲಿ ಕಟ್ಟುವುದಕ್ಕೆ ಸಾಧ್ಯ ಇಲ್ಲ. ಅಧ್ಯಕ್ಷರೆ, ಕೇವಲ 20 ಲಕ್ಷದಲ್ಲಿ ವೆಚ್ಚಕ್ಕಾಗಿ 6 ಲಕ್ಷ ಹೋಗುತ್ತದೆ, ಹಾಸ್ಟಲ್ ಮೇನ್‌ಟೀನ್ಸ್‌ಗೆ ಸುಮಾರು 12 ಲಕ್ಷ ಹೋಗುತ್ತದೆ, ಮತ್ತು ಇತರೇ ಖರ್ಚು-ವೆಚ್ಚಕ್ಕೆ 2 ಲಕ್ಷ ರೂ. ಹೋಗುತ್ತದೆ. ಅವರು ಕೊಟ್ಟಂತಹ 20 ಲಕ್ಷ ರೂಪಾಯಿಗಳಲ್ಲಿ ಒಂದು ಪೈಸೆ ಕೂಡ ಉಳಿಯುವುದಿಕ್ಕೆ ಸಾಧ್ಯ ಇಲ್ಲ. ಆದುದರಿಂದ ಈ ಕಟ್ಟಡ ಕಟ್ಟುವುದಕ್ಕೆ ನಿರ್ದಿಷ್ಟವಾದಂತಹ ಕ್ರಮ ತೆಗೆದುಕೊಳ್ಳಬೇಕು. ಈಗಾಗಲೇ ನಾನು ಎರಡೂವರೆ ಎಕರೆ ಭೂಮಿಯನ್ನು ಪುಕ್ಕಟೆಯಾಗಿ ಕೊಡಿಸಿದ್ದೇನೆ. ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಪತ್ರವನ್ನು ತಯಾರಿಸಿ ಸರ್ಕಾರಕ್ಕೆ ಕಳುಹಿಕೊಟ್ಟಿದ್ದಾರೆ. 50

ಲಕ್ಷ ಎಸ್ಟಿಮೇಟ್ ಹಣವನ್ನು ಬಿಡುಗಡೆ ಮಾಡುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂದು ನಿರ್ದಿಷ್ಟವಾಗಿ ಹೇಳಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಸನ್ಮಾನ್ಯ ಅಧ್ಯಕ್ಷರೆ, 1996-97ನೇ ಸಾಲಿನಲ್ಲಿ ಪ್ರಾರಂಭವಾಗಿರುವಂತಹ ಶಾಲೆ ರನ್ನ ಸ್ಮಾರಕ ಶಾಲೆ. ಈ ಶಾಲೆಗೆ 1996-97ನೇ ಸಾಲಿನಲ್ಲಿ ನಾವು 10 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಆ ಶಾಲೆಗೆ ಬಂದಿಲ್ಲ. ಆದರೆ ನಾವು ಬರದೇ ಇದ್ದರೂ ಕಟ್ಟಡಕ್ಕೋಸ್ಕರ ನಾವು ಉಳಿದಿರುವಂತಹ ಹಣವನ್ನು ಶೇಖರಣೆ ಮಾಡಿ ಇಟ್ಟಿದ್ದೇವೆ. ಈ ವರ್ಷ ಸಹ ಅದಕ್ಕೆ ಇಪ್ಪತ್ತು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಅದು ಅಷ್ಟು ಅವಶ್ಯಕತೆ ಇದೆ ಎಂದು ನಮ್ಮ ಸ್ನೇಹಿತರು ಏನು ಹೇಳುತ್ತಿದ್ದಾರೆ, ಅದಕ್ಕೆ ಎಷ್ಟು ಖರ್ಚಾಗಬೇಕೋ ಅಷ್ಟು ಖರ್ಚಾಗುತ್ತದೆ. ಅಲ್ಲದೆ 1998-99ನೇ ಸಾಲಿನಲ್ಲಿ ಈ ಕಟ್ಟಡವನ್ನು ಕಟ್ಟಿಸಲೇ ಬೇಕಾಗುತ್ತದೆ. ಏಕೆಂದರೆ ಅದರ ಅವಶ್ಯಕತೆ ಇದೆ. ಈಗ ಇರತಕ್ಕಂತಹ ಮಾದರಿ ಪ್ರಾಥಮಿಕ ಪಾಠಶಾಲೆ ಏನಿದೆ, ಅಲ್ಲಿ ಇರುವಂತಹ ಮಕ್ಕಳಿಗೆ ಅನಾನುಕೂಲ ಆಗುತ್ತದೆ ಎಂಬ ಭಾವನೆಯನ್ನು ಇಟ್ಟುಕೊಂಡು ಇದನ್ನು ಕಟ್ಟಿಸಬೇಕಾಗುತ್ತದೆ. ಈಗ ಒಟ್ಟು 8 ರೂಂಗಳು ಇದೆ, 3 ರೂಂ ಅವರಿಗೆ ಬಿಟ್ಟುಕೊಟ್ಟು, ಇನ್ನುಳಿದ ರೂಂಗಳನ್ನು ನಮಗೆ ಒದಗಿಸುವಂತಹ ವ್ಯವಸ್ಥೆ ಮಾಡಿಕೊಟ್ಟಿದ್ದೇವೆ. ಮತ್ತು ಈಗ ಕಟ್ಟಡದ ಅವಶ್ಯಕತೆ ಇದೆ. ಮಾನ್ಯ ಸ್ನೇಹಿತರು ಈ ಪ್ರಶ್ನೆಯನ್ನು ಕೇಳಿದ ಉದ್ದೇಶ ನನಗೂ ಅರ್ಥವಾಗಿದೆ. ಆದುದರಿಂದ ಆ ಉದ್ದೇಶವನ್ನು ತಿಳಿದುಕೊಂಡು ಬರುವ ವರ್ಷದಲ್ಲಿ ಖಂಡಿತ ಈ ಕಟ್ಟಡವನ್ನು ಕಟ್ಟಿಸಿಕೊಡುವುದಕ್ಕೆ ಎಲ್ಲಾ ರೀತಿಯ ಸವಲತ್ತುಗಳನ್ನು ಒದಗಿಸುತ್ತೇವೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದು ಮಾದರಿ ಶಾಲೆ ಆಗಿರುವುದರಿಂದ ಎಲ್ಲಾ ರೀತಿಯ ಸವಲತ್ತುಗಳನ್ನು ಒಳಗೊಂಡಿರಬೇಕು. ಎಂಟು ಕೊಠಡಿಗಳು ಇತ್ತು. ಮೂರು ಕೊಠಡಿಗಳನ್ನು ಅವರು ನಡೆಸುತ್ತಿದ್ದಾರೆ, ಇನ್ನು ಐದು ರೂಂಗಳನ್ನು ನಮ್ಮ ರನ್ನ ಶಾಲೆಯನ್ನು ನಡೆಸುವುದಕ್ಕೆ ಕೊಟ್ಟಿದ್ದೇವೆ. ಏಕೆಂದರೆ ನಾವು ಮಂಜೂರು ಮಾಡಿದ ತಕ್ಷಣ ಹಣ ಒದಗಿಸುವುದಿಲ್ಲ, ಒದಗಿಸುವುದಕ್ಕೆ ಸಾಧ್ಯ ಆಗುವುದಿಲ್ಲ. ಏಕೆಂದರೆ ಬಜೆಟ್‌ನಲ್ಲಿ ಹಣ ಇಲ್ಲದೇ ಇರುವುದರಿಂದ ತಾತ್ಕಾಲಿಕವಾಗಿ ಈ ಒಂದು ವ್ಯವಸ್ಥೆಯನ್ನು ಮಾಡಿಕೊಂಡಿರುವುದು. ಮುಂದೆ ಇದಕ್ಕೆ ವ್ಯವಸ್ಥಿತವಾದ ಕ್ರಮವನ್ನು ಕೈಗೊಳ್ಳುತ್ತೇವೆ ಎಂದು ಹೇಳುತ್ತೇನೆ.

ವಿಷಯ: ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ರಕ್ತನಿಧಿ ಬ್ಯಾಂಕ್‌ಗಳು

472 (3877)

ಶ್ರೀ ಜಗದೀಶ್‌ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?